# UNI -Kannada

United News of India
India's Multi Lingual News Agency



**ಕರ್ನಾಟಕದಲ್ಲಿ ಗುಣಮಟ್ಟದ ಮಾತೃ ಆರೈಕೆಯ ದೃಢೀಕರಣಕ್ಕೆ 'ಕೆಎಸ್‌ಒಜಿಎ-ಮಾನ್ಯತಾ' ಸಹಯೋಗ**

ಬೆಳಗಾವಿ, ಅ 6 [ಯುಎನ್ಐ] ಕರ್ನಾಟಕ ಸ್ಟೇಟ್ ಅಬ್‌ಸ್ಟೆಟ್ರಿಕ್ಸ್ ಅಂಡ್ ಗೈನಾಕಾಲಜಿಕಲ್ ಅಸೋಸಿಯೇಷನ್ (ಕೆಎಸ್‌ಒಜಿಎ) ಮತ್ತು ಮಾನ್ಯತಾ ಸಂಸ್ಥೆಗಳು ತಾಯ್ತನದ ನಿರೀಕ್ಷೆಯಲ್ಲಿರುವವರಿಗೆ ಆರೋಗ್ಯಸೇವೆಯ ಗುಣಮಟ್ಟ ಹೆಚ್ಚಿಸಲು ಇದೀಗ ಒಗ್ಗೂಡಿವೆ. ಖಾಸಗಿ ಆರೋಗ್ಯಸೇವಾ ಪೂರೈಕೆದಾರರು ಮತ್ತು ವೈದ್ಯ ಸಹಾಯಕ ಸಿಬ್ಬಂದಿಗೆ ಮಗುವಿನ ಜನನ ಮತ್ತು ನಂತರದಲ್ಲಿ ಗುಣಮಟ್ಟ ಹಾಗೂ ಗೌರವಯುತ ಆರೈಕೆ ನೀಡಲು ಅಗತ್ಯವಿರುವ ಮಾನದಂಡಗಳ ಬಗ್ಗೆ ತರಬೇತಿ ನೀಡಲು ತೀರ್ಮಾನಿಸಿವೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾನ್ಯತಾದ ರಾಷ್ಟ್ರೀಯ ಸಂಯೋಜಕರೂ, ಆರ್ಟಿಸ್ಟ್ (ಏಷ್ಯನ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಸ್ಕಿಲ್ ಟ್ರಾನ್ಸ್‌ಫರ್) ಸಿಇಒ ಡಾ.ಹೇಮಾ ದಿವಾಕರ್, ಮಾನ್ಯತಾ ಈಗಾಗಲೇ 4 ರಾಜ್ಯಗಳ 25 ಜಿಲ್ಲೆಗಳ 1800 ಆರೋಗ್ಯಸೇವಾ ಪೂರೈಕೆದಾರರಿಗೆ ಮಾನ್ಯತೆ ನೀಡಿದ್ದು, ಈ ಮೂಲಕ ದೇಶದ 11,117,070 ಜನರಿಗೆ ಚಿಕಿತ್ಸೆ ನೀಡಿದೆ. ವಿಶೇಷವಾಗಿ ರಾಜ್ಯದಲ್ಲಿ ಈ ಉಪಕ್ರಮದ ಮೂಲಕ 5 ಲಕ್ಷ ಮಹಿಳೆಯರನ್ನು ತಲುಪುವ ನಿರೀಕ್ಷೆ ಹೊಂದಲಾಗಿದೆ ಎಂದರು.

http://www.unikannada.com/